ಈ ಎರಡು ಗ್ರಾಮಗಳ ಕುಡಿಯುವ ನೀರಿನ ಕಾಮಗಾರಿಗಳು ಏಪ್ರಿಲ್ 1999ರ ಮೊದಲನೇ ವಾರದ ಅಂತ್ಯ ದೊಳಗೆ ಪೂರ್ಣವಾಗುವುದೆಂದು ನಿರೀಕ್ಷಿಸಲಾಗಿದೆ.

ಈ ಎರಡು ಯೋಜನೆಗಳ ಅಂದಾಜು ಮೊತ್ತ ರೂ.93.93 ಲಕ್ಷ ಆಗಿದ್ದು ಇದುವರೆವಿಗೂ ಈ ಎರಡು ಯೋಜನೆಗಳಿಗೆ ಖರ್ಚಾದ ಹಣ ರೂ.95.31 ಲಕ್ಷ (ಪರಿಷ್ಕರಿಸಿದ ಅಂದಾಜು ಮೊತ್ತ).

ಹಾಸನ ಜಿಲ್ಲಾ ಪಂಚಾಯಿತಿಯಿಂದ ಅಂತರ್ಜಲ ಅಭಿವೃದ್ಧಿ

100 (745) ಶ್ರೀ ಬಿ.ಶಿವರಾಮು (ಗಂಡಸಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1996-97, 1997-98 ಮತ್ತು 1998-99ನೇ ಸಾಲುಗಳಲ್ಲಿ ಹಾಸನ ಜಿಲ್ಲಾ ಪಂಚಾಯತಿಯಿಂದ ಅಂತರ್ಜಲ ಅಭಿವೃದ್ಧಿಗಾಗಿ ಕೈಗೊಂಡಿರುವ ಯೋಜನೆಗಳ ಸಂಖ್ಯೆ ಎಷ್ಟು ?

ಆ) ಯಾವ ಯೋಜನೆಯಡಿ ತೆಗೆದುಕೊಳ್ಳಲಾಗಿದೆ : ಹಾಗೂ ಈ ಯೋಜನೆಗಳಿಗೆ ಖರ್ಚಾಗಿರುವ ಒಟ್ಟು ಹಣ ಎಷ್ಟು (ವರ್ಷವಾರು ಹಾಗೂ ಯೋಜನೆ ವಾರು ಮಾಹಿತಿ ಒದಗಿಸುವುದು).

ಇ) ಯೋಜನೆಗಳನ್ನು ತಾಂತ್ರಿಕವಾಗಿ ಅನುಷ್ಠಾನಗೊಳಿಸಲಾಗಿದೆಯೇ?

ಶ್ರೀ ಉಮೇಶ್.ವಿ.ಕತ್ತಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ವಿವರಗಳು ಈ ಕೆಳಕಂಡತಿವೆ.

ವರ್ಷ	ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ
1996-97	585
1997-98	651
1998-99	325

ಆ) ಈ ಕಾಮಗಾರಿಗಳನ್ನು 4 ಕಾರ್ಯಕ್ರಮಗಳಡಿ ತೆಗೆದುಕೊಳ್ಳಲಾಗಿದ್ದು, ವರ್ಷವಾರು : ಕಾರ್ಯಕ್ರಮವಾರು ವೆಚ್ಚದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ.ಸಂ.	ಕಾರ್ಯಕ್ರಮ	ವರ್ಷ 96-97	97-98	98-99
1.	ಉದ್ಯೋಗ ಭರವಸೆ ಯೋಜನೆ	117.005	136.981	76.855
2.	ಬರಪೀಡಿತ ಪ್ರದೇಶಾ ಭಿವೃದ್ಧಿ ಕಾರ್ಯಕ್ರಮ	16.306	19.985	-
3.	ಪಶ್ಚಿಮಘಟ್ಟಗಳ ಅಭಿ ವೃದ್ಧಿ ಯೋಜನೆ	31.240	33.976	27.850
4.	ದಶಲಕ್ಷ ಬಾವಿ ಯೋಜನೆ	147.217	145.6477	60.351

ಇ) ಹೌದು